ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)

**ಸಂಖ್ಯೆ: ಚುನಾವಣೆ/ವಿವ/42/2015-16**

ಪ್ರಾದೇಶಿಕ ಆಯುಕ್ತರ ಕಛೇರಿ,
2ನೇ ಮಹಡಿ , ಬಿ.ಎಂ.ಟಿ.ಸಿ ಕಟ್ಟಡ,
ಕೆ.ಹೆಚ್.ರಸ್ತೆ , ಶಾಂತಿನಗರ,
ಬೆಂಗಳೂರು, ದಿನಾಂಕ: 22-10-2016.

**ರವರಿಗೆ,**

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ನಿರ್ಮಾಣ ಭವನ, ಡಾ: ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560 010.

**ಮಾನ್ಯರೆ,**

**ವಿಷಯ:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಚುನಾವಣೆ ಸಂಬಂಧ ಸ್ವೀಕೃತವಾಗುವ ಆಕ್ಷೇಪಣೆಗಳು ಮತ್ತು ಡೆಲಿಗೇಟ್ಸ್ ನಮೂನೆಗಳ ಬಗ್ಗೆ ಕ್ರಮ ಕೈಗೊಳ್ಳುವ ಕುರಿತು.

**ಉಲ್ಲೇಖ:**1. ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಆದೇಶ ಸಂಖ್ಯೆ: ಸಚುಪ್ರಾ/ ಚುಅನೇ/ಅಪೆಕ್ಸ್/06/2016 ದಿನಾಂಕ: 16-1-2016.

2. ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಅಧಿಸೂಚನೆ ಸಂಖ್ಯೆ:ಸಚುಪ್ರಾ/ಆಡಳಿತ/ಚುನಾವಣೆ/07/2016 ದಿನಾಂಕ: 16-1-2016.
3. ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ: ಸಚುಪ್ರಾ/ಬೆಂ.ವಿ./ ಆಮಂಚು/ ಚುನಾವಣೆ/ 1426/2015/391 ದಿ: 18-2-2016.
4. ಈ ಕಛೇರಿಯ ಸಮಸಂಖ್ಯೆ ಅಧಿಕೃತ ಜ್ಞಾಪನ ದಿ:7-10-2016.
5. ಕಾರ್ಯದರ್ಶಿ, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ: ಸಚುಪ್ರಾ/ಬೆಂ.ವಿ./ಆಮಂ/1426/2015/1211 ದಿನಾಂಕ: 17-10-2016.
6. ಕಾರ್ಯದರ್ಶಿ, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ: ಸಚುಪ್ರಾ/ಬೆಂ.ವಿ./ಆಮಂ/1426/2015/1212 ದಿನಾಂಕ: 17-10-2016.

*******

ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರರವರ ಉಲ್ಲೇಖ(1)ರ ಆದೇಶದಂತೆ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರುರವರನ್ನು ಅವರ ಕಾರ್ಯವ್ಯಾಪ್ತಿಯಲ್ಲಿ ಒಳಪಡುವ ಅಪೆಕ್ಸ್ ಸಹಕಾರ ಸಂಘಗಳ ಆಡಳಿತ ಮಂಡಳಿ ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಜಿಲ್ಲಾ ಚುನಾವಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ. ಹಾಗೂ ಉಲ್ಲೇಖ(2)ರ ಅಧಿಸೂಚನೆಯಲ್ಲಿ ಅಪೆಕ್ಸ್ ಸಹಕಾರ ಸಂಘಗಳ ಚುನಾವಣೆ ನಡೆಸುವ ಬಗ್ಗೆ ಕಾಲಾಕಾಲಕ್ಕೆ ಕೈಗೊಳ್ಳಬೇಕಾದ ಕ್ರಮಗಳ ವಿವರಿಸಲಾಗಿರುತ್ತದೆ ಹಾಗೂ ಚುನಾವಣೆಗೆ ದಿನಾಂಕಗಳನ್ನು ನಿಗದಿಪಡಿಸಲಾಗಿರುತ್ತದೆ. ಅದರಂತೆ ಅಪೆಕ್ಸ್ ಸಹಕಾರ ಸಂಘಗಳಿಗೆ ದಿನಾಂಕ: 28-9-2016 ಮತ್ತು 29-9-2016 ಈ ಎರಡು ದಿನಾಂಕಗಳಲ್ಲಿ ಸೂಕ್ತವೆನಿಸುವ ಯಾವುದೇ ದಿನಾಂಕದಲ್ಲಿ ಚುನಾವಣೆಯನ್ನು ನಿಗದಿಪಡಿಸತಕ್ಕದ್ದೆಂದು ತಿಳಿಸಲಾಗಿದೆ.

ಉಲ್ಲೇಖ(3)ರ ಪತ್ರದಲ್ಲಿ "ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕರಿಯು ರಾಜ್ಯ ಮಟ್ಟದ ಅಪೆಕ್ಸ್/ಫೆಡರಲ್ ಸಂಸ್ಥೆಯಾಗಿರುತ್ತದೆ. ಸಂಯುಕ್ತ ಸಹಕಾರಿಯ ಚುನಾವಣೆಯನ್ನು ಪ್ರಾಥಮಿಕ/ಮಾಧ್ಯಮಿಕ/ಒಕ್ಕೂಟ ಸಹಕಾರಿಗಳ ಪ್ರತಿನಿಧಿಗಳ ಮುಖಾಂತರ ನಡೆಸಬೇಕಾಗಿರುವುದರಿಂದ, ಮಾಧ್ಯಮಿಕ ಸಹಕಾರ ಸಂಘಗಳಿಗೆ/ ಸಹಕಾರಿಗಳಿಗೆ ಗೊತ್ತುಪಡಿಸಲಾದ ಚುನಾವಣಾ ದಿನಾಂಕಗಳಲ್ಲಿಯೇ ಫೆಡರಲ್ ಸಹಕಾರ ಸಂಘಗಳಿಗೆ/ ಒಕ್ಕೂಟ ಸಹಕಾರಿಗಳಿಗೆ ಚುನಾವಣೆಯನ್ನು ನಡೆಸಬಹುದಾಗಿರುತ್ತದೆ. ಅದೇ ರೀತಿಯಲ್ಲಿ ಫೆಡರಲ್ ಸಹಕಾರ ಸಂಘಗಳಿಗೆ/ ಸಹಕಾರಿಗಳಿಗೆ ಗೊತ್ತುಪಡಿಸಿರುವ ದಿನಾಂಕಗಳಲ್ಲಿ ಸೌಹಾರ್ದ ಸಂಯುಕ್ತ ಸಹಕಾರಿಯ ಚುನಾವಣೆಯನ್ನು ನಡೆಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು, ಫೆಡರಲ್ ಸಹಕಾರ ಸಂಘಗಳು/ ಒಕ್ಕೂಟ ಸಹಕಾರಿಗಳಿಗೆ ಗೊತ್ತುಪಡಿಸಲಾಗಿರುವ ಚುನಾವಣಾ ದಿನಾಂಕಗಳಲ್ಲಿ ಸಂಯುಕ್ತ ಸಹಕಾರಿಯ ಚುನಾವಣೆಯನ್ನು ನಡೆಸಲು ಅಗತ್ಯ ಕ್ರಮ ಕೈಗೊಳ್ಳಲು ಚುನಾವಣಾಧಿಕಾರಿಗಳಿಗೆ ಈ ಮೂಲಕ ಅನುಮತಿ ನೀಡಲಾಗಿದೆ." ಎಂದು ತಿಳಿಸಲಾಗಿರುತ್ತದೆ. ಅದರಂತೆ ಪರಿಶೀಲಿಸಲಾಗಿ, ಫೆಡರಲ್ ಸಹಕಾರ ಸಂಘಗಳಿಗೆ ದಿನಾಂಕ: 30-7-2016 ಮತ್ತು 31-7-2016 ಈ ಎರಡು ದಿನಾಂಕಗಳಲ್ಲಿ ಸೂಕ್ತವೆನಿಸುವ ಯಾವುದೇ ದಿನಾಂಕದಲ್ಲಿ ಚುನಾವಣೆಯನ್ನು ನಿಗದಿಪಡಿಸತಕ್ಕದ್ದೆಂದು ತಿಳಿಸಲಾಗಿದೆ.

ತಮ್ಮಿಂದ ಎಲ್ಲಾ ಅಗತ್ಯ ದಾಖಲೆಗಳನ್ನು ಪಡೆದು ಪರಿಶೀಲಿಸುವಲ್ಲಿ ಉಲ್ಲೇಖ(1)ರಿಂದ (3)ರವರೆಗಿನ ಆದೇಶ ಮತ್ತು ಪತ್ರಗಳಲ್ಲಿ ನಿಗದಿಪಡಿಸಿದ ದಿನಾಂಕಗಳು ಮುಕ್ತಾಯಗೊಂಡಿರುತ್ತವೆ. ಆದ್ದರಿಂದ ಚುನಾವಣೆ ನಡೆಸಲು ನಿಯಮಾನುಸಾರ ಅಗತ್ಯವಿರುವ ಕಾಲಾವಕಾಶವನ್ನು ಗಮನದಲ್ಲಿಟ್ಟುಕೊಂಡು ದಿನಾಂಕ:27-11-2016ರಂದು ಚುನಾವಣಾ ದಿನಾಂಕವನ್ನು ನಿಗದಿಪಡಿಸಿ, ಉಲ್ಲೇಖ(4)ರನ್ವಯ 45 ದಿನಗಳ ಪೂರ್ವದಲ್ಲಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ಕಾರ್ಯದರ್ಶಿ, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರುರವರ ಉಲ್ಲೇಖ(5)ರ ಪತ್ರದನ್ವಯ ಮೇಲ್ಕಂಡ ದಿನಾಂಕದಂದು ಚುನಾವಣೆ ನಡೆಸುವ ಬಗ್ಗೆ ಅನುಮತಿ ನೀಡಲಾಗಿದೆ. ಹಾಗೂ ಉಲ್ಲೇಖ(6)ರ ಪತ್ರದನ್ವಯ ಈಗಾಗಲೇ ಡೆಲಿಗೇಟ್ಸ್ ನಮೂನೆಗಳನ್ನು ತಮಗೆ ನೀಡಲಾಗಿರುತ್ತದೆ.

ಉಲ್ಲೇಖ(4)ರ ದಿನಾಂಕ:7-10-2016ರ ಅಧಿಕೃತ ಜ್ಞಾಪನದಲ್ಲಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಿ 30 ದಿನಗಳ ಕಾಲಾವಕಾಶ ನೀಡಲಾಗಿದ್ದು, ಸದರಿ ಕಾಲಾವಧಿಯು ದಿನಾಂಕ:5-11-2016ಕ್ಕೆ ಮುಕ್ತಾಯಗೊಳ್ಳಲಿರುತ್ತದೆ. ಚುನಾವಣಾ ದಿನಾಂಕಕ್ಕೆ ಸ್ಪಷ್ಟ 15 ದಿನಗಳ ಮುಂಚೆ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಬೇಕಾಗಿರುತ್ತದೆ.

ಆದುದರಿಂದ ಕರಡು ಮತದಾರರ ಪಟ್ಟಿಗೆ ಆಕ್ಷೇಪಣೆಗಳು ಸ್ವೀಕೃತವಾಗಿದ್ದಲ್ಲಿ, ಸದರಿ ಆಕ್ಷೇಪಣೆಗಳನ್ನು ಪರಿಗಣಿಸುವ ಅಥವಾ ತಿರಸ್ಕರಿಸುವ ಬಗ್ಗೆ ಸಹಕಾರ ಚುನಾವಣಾ ಪ್ರಾಧಿಕಾರದಿಂದ ನೇಮಕ ಮಾಡಲಾಗುವ ಪರಿಶೀಲನಾಧಿಕಾರಿಗಳಿಂದ ಅಗತ್ಯ ಪರಿಶೀಲನಾ ಕ್ರಮವಹಿಸಿ, ಪರಿಶೀಲನಾಧಿಕಾರಿಗಳ ವಿವರಣೆಯೊಂದಿಗೆ ವಸ್ತುನಿಷ್ಠ ವರದಿಯನ್ನು ತಕ್ಷಣವೇ ಈ ಕಛೇರಿಗೆ ಸಲ್ಲಿಸುವುದು. ಹಾಗೂ ಸದಸ್ಯ ಸಹಕಾರಿಗಳಿಂದ ಭರ್ತಿ ಮಾಡಿ ವಾಪಸ್ಸು ಬಂದಿರುವ ಡೆಲಿಗೇಟ್ಸ್ ನಮೂನೆಗಳನ್ನು ಸಹಕಾರ ಚುನಾವಣಾ ಪ್ರಾಧಿಕಾರದಿಂದ ನೇಮಕ ಮಾಡಲಾಗುವ ಸಂಬಂಧಪಟ್ಟ ಪರಿಶೀಲನಾಧಿಕಾರಿಗಳ ಪರಿಶೀಲನೆಗೆ ಒಳಪಡಿಸಿ, ಯಾವುದಾದರೂ ಡೆಲಿಗೇಟ್ಸ್ ನಮೂನೆಗಳು ತಿರಸ್ಕೃತಗೊಳಿಸಬೇಕಾದಲ್ಲಿ ತಕ್ಷಣವೇ ಈ ಕಛೇರಿಗೆ ವಸ್ತುನಿಷ್ಠ ವರದಿ ಸಲ್ಲಿಸುವುದು. ಉಳಿದಂತೆ

ಕ್ರಮಬದ್ಧವಾಗಿರುವ ಡೆಲಿಗೇಟ್ಸ್ ನಮೂನೆಗಳ ಮೇಲೆ ಪರಿಶೀಲನಾಧಿಕಾರಿಗಳ ದೃಢೀಕರಣ ಪಡೆಯುವುದು. ಡೆಲಿಗೇಟ್ಸ್ ನಮೂನೆಗಳ ಜೊತೆ ಸದಸ್ಯ ಸಹಕಾರಿಗಳಲ್ಲಿ ಡೆಲಿಗೇಟ್ ಆಯ್ಕೆ ಬಗ್ಗೆ ನಡೆಸಿರುವ ನಡವಳಿಯ ದೃಢೀಕೃತ ಪ್ರತಿ ಮತ್ತು ನಡವಳಿಯ ಮೂಲ ವಹಿಯನ್ನು ಪರಿಶೀಲನೆಗಾಗಿ ಈ ಕಛೇರಿಗೆ ಹಾಜರುಪಡಿಸಲು ಕೋರಿದೆ.

ನಂತರ ಉಲ್ಲೇಖ(6)ರ ಸಹಕಾರ ಚುನಾವಣಾ ಪ್ರಾಧಿಕಾರದ ಪತ್ರದಲ್ಲಿ ತಿಳಿಸಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಂತಿಮ ಮತದಾರರ ಪಟ್ಟಿಯ ಕರಡು ಪ್ರತಿಯನ್ನು ತಾವು ತಯಾರಿಸಿ ದೃಢೀಕರಿಸಿ (ಸಾಫ್ಟ್ ಮತ್ತು ಹಾರ್ಡ್ ಕಾಪಿಗಳಲ್ಲಿ) ದಿನಾಂಕ: 05-11-2016ರಂದೇ ತಪ್ಪದೇ ಜಿಲ್ಲಾ ಚುನಾವಣಾಧಿಕಾರಿಗಳ ಅನುಮೋದನೆಗಾಗಿ ಈ ಕಛೇರಿಗೆ ಮುದ್ದಾಂ ಸಲ್ಲಿಸಲು ಕೋರಿದೆ.

ತಮ್ಮ ವಿಶ್ವಾಸಿ,

Jayanthi K

ಪ್ರಾದೇಶಿಕ ಆಯುಕ್ತರು,
ಬೆಂಗಳೂರು ವಿಭಾಗ,
ಬೆಂಗಳೂರು.